

ತಮಿಳುನಾಡಿನ ಕಾಂಚಿಪುರಂನಲ್ಲಿ 20 ವರ್ಷದ ದಲಿತ ಹೆಣ್ಣುಮಗಳನ್ನು ಬಲಾತ್ಕರಿಸಿ ಕೊಲ್ಲಲಾಯಿತು. ತಮಿಳುನಾಡಿನ 32 ವರ್ಷದ ಯುವತಿ ಕಡಲೂರಿನ ತನ್ನ ಮನೆಗೆ ಹಿಂದಿರುಗುತ್ತಿದ್ದಾಗ ಐವರು ಗಂಡಸರು ಆಕೆಯನ್ನು ಬಲಾತ್ಕರಿಸಿದರು. ಗುಜರಾತಿನ ವಡೋದರದಲ್ಲಿ 14 ವರ್ಷದ ಹೆಣ್ಣುಮಗಳನ್ನು ಇಬ್ಬರು ಬಲಾತ್ಕರಿಸಿದರು. ಚಂಡೀಗಢದಲ್ಲಿ 11 ವರ್ಷದ ಬಾಲಕಿಯನ್ನು ಮೂರು ದಿನ ಬಂಧನದಲ್ಲಿಟ್ಟು ಅತ್ಯಾಚಾರ ಎಸಗಲಾಯಿತು. ಇವೆಲ್ಲ ನಡೆದದ್ದು ಒಂದೇ ದಿನ. ಉನ್ನಾವೊ ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಗೆ ನ್ಯಾಯ ಸಿಗಬಹುದೆಂಬ ನಿರೀಕ್ಷೆಯಲ್ಲಿ ಇದ್ದಾಗಲೇ, ಜಾಮೀನಿನ ಮೇಲೆ ಹೊರಬಂದ ಆರೋಪಿಯೊಬ್ಬ ಸಂತ್ರಸ್ತೆಯನ್ನು ಸಜೀವ ದಹಿಸಿದ ಘಟನೆ ಇತ್ತೀಚಿನದು.

2017ರ ಕ್ರೈಂ ರೆಕಾರ್ಡ್ಸ್ ಬ್ಯೂರೋ ವರದಿ ಪ್ರಕಾರ, ಇಂಡಿಯಾದಲ್ಲಿ ಒಂದು ದಿನದಲ್ಲಿ 92 ಅತ್ಯಾಚಾರ ನಡೆಯುತ್ತವೆ. ಇವು ದಾಖಲು ಆಗುವಂತಹವು. ಇದರ ಎರಡರಷ್ಟಾದರೂ ದಾಖಲಾಗದೆ ಉಳಿಯುತ್ತವೆ. ಇದನ್ನು ತಡೆಯುವಲ್ಲಿ, ಹತ್ತಿಕ್ಕುವಲ್ಲಿ ಕಾನೂನು ವಹಿಸಬಲ್ಲ ಪಾತ್ರ ಎಂಥದ್ದು?

ಕಾನೂನು, ಕೋರ್ಟ್, ಪ್ರಕರಣಗಳ ಇತ್ಯರ್ಥಕ್ಕೆ ಆಗುವ ಸಮಯ, ಶಿಕ್ಷೆಯ ಪ್ರಕಾರಗಳು ಇವೆಲ್ಲವೂ ಕಳೆದ ಒಂದು ವಾರದಲ್ಲಿ ಸಾರ್ವಜನಿಕ ಚರ್ಚೆಗೆ ಒಳಗಾಗಿವೆ. ರಾಜ್ಯಸಭಾ ಸದಸ್ಯೆ ಜಯಾ ಬಚ್ಚನ್ ಸೇರಿದಂತೆ ಹಲವರು, "ಅತ್ಯಾಚಾರಿಗಳನ್ನು ಸಾರ್ವಜನಿಕವಾಗಿ ಕೊಚ್ಚಿಹಾಕಬೇಕು, ಮರ್ಮಾಂಗ ತುಂಡರಿಸಬೇಕು," ಎನ್ನುವಷ್ಟರ ಮಟ್ಟಿಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಸಾರ್ವಜನಿಕರ ಈ ಸಿಟ್ಟು ನ್ಯಾಯಯುತ. ಆದರೆ ಕಠಿಣ ಶಿಕ್ಷೆಯೊಂದೇ ಈ ಬಗೆಯ ಅಪರಾಧಗಳನ್ನು ಹತ್ತಿಕ್ಕಬಲ್ಲದೇ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

2012ರ ಡಿಸೆಂಬರಿನಲ್ಲಿ ದೆಹಲಿಯಲ್ಲಿ ನಡೆದ ಅತ್ಯಾಚಾರ ಪ್ರಕರಣದಲ್ಲಿ ಆರು ಜನ ಆರೋಪಿಗಳಿದ್ದರು. ಅವರಲ್ಲೊಬ್ಬ ಬಾಲಾಪರಾಧಿಯಾಗಿದ್ದ. ಆತನಿಗೆ ಕೊಡಬಹುದಾದ ಗರಿಷ್ಠ ಶಿಕ್ಷೆ ಮೂರು ವರ್ಷ ಜೈಲಾಯಿತು. ಉಳಿದ ಐವರಲ್ಲಿ, ಘಟನೆಯ ವೇಳೆ ಅತ್ಯಂತ ಕ್ರೂರವಾಗಿ ನಡೆದುಕೊಂಡ ಪ್ರಮುಖ ಆರೋಪಿಯ ದೇಹ ಮಾರ್ಚ್ 2013ರ ಒಂದು ಮುಂಜಾನೆ ತಿಹಾರ್ ಜೈಲಿನ ಅವನ ಕೋಣೆಯಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಈ ಆರೂ ಜನ ಪ್ರಕರಣ ನಡೆದ ಆ ಸಂಜೆ ಏಳರಿಂದ ಎಂಟೂವರೆ–ಒಂಬತ್ತರವರೆಗೂ ಕುಡಿದು ಪಾರ್ಟಿ ಮಾಡಿದ್ದಾರೆ. ನಂತರ ತಮ್ಮ ಬಸ್ಸಿಗೆ ಒಬ್ಬ ಪ್ರಯಾಣಿಕನನ್ನು ಹತ್ತಿಸಿಕೊಂಡು, ಅವನಲ್ಲಿದ್ದ ವಸ್ತುಗಳು, ಹಣವನ್ನು ದೋಚಿದ್ದಾರೆ. ಅವನನ್ನು ಬಸ್ಸಿನಿಂದ ಹೊರಹಾಕಿ ಮುಂದೆ ಹೋಗುತ್ತಾ, ಈ ಹುಡುಗಿ ಮತ್ತು ಆಕೆಯ ಸ್ನೇಹಿತನನ್ನು ಹತ್ತಿಸಿಕೊಂಡಿದ್ದಾರೆ. ಚಲಿಸುತ್ತಿದ್ದ ಬಸ್ಸಿನಲ್ಲಿ ಮುಂದಿನ ಒಂದು ಗಂಟೆಯಲ್ಲಿ ಈ ಕೃತ್ಯ ನಡೆದಿದೆ. ಈ ಪ್ರಕರಣದ ಮುಖ್ಯ ಆರೋಪಿ ದೆಹಲಿಯಲ್ಲಿ ಬಸ್ ಚಾಲಕನಾಗಿದ್ದ. ಕುಡಿದು ಸುತ್ತಮುತ್ತಲಿನವರೊಂದಿಗೆ ಅತಿಯಾದ ಸಿಟ್ಟಿನಿಂದ ಆಗಾಗ ಜಗಳ ಮಾಡುತ್ತಿದ್ದು, 'ಮೆಂಟಲ್' ಎಂದೇ ಕರೆಸಿಕೊಳ್ಳುತ್ತಿದ್ದ.

ಹೈದರಾಬಾದಿನಲ್ಲಿ ನಡೆದ ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪಿಗಳ ಹಿನ್ನೆಲೆ, ಜೀವನಕ್ರಮಗಳು ಕೂಡ ಇಂಥದ್ದೇ ಆಗಿವೆ. ಹೆಣ್ಣನ್ನು ಆಕೆಯ ಅನುಮತಿ ಇಲ್ಲದೆ, ಅವಳ ಇಚ್ಛೆಯ ವಿರುದ್ಧ ಸಂಭೋಗಿಸುವುದು ಅಪರಾಧ ಎನ್ನುವುದನ್ನೂ ಯೋಚಿಸದ ಮಾನಸಿಕ ಸ್ಥಿತಿ ಇದು. ಅಷ್ಟೇ ಅಲ್ಲದೆ, ಅತ್ಯಾಚಾರ ಎಷ್ಟೋ ಬಾರಿ ಸಂಭೋಗದ ಕ್ರಿಯೆಯಷ್ಟೇ ಆಗಿರದೆ, ಬಲಪ್ರದರ್ಶನದ ಕ್ರಿಯೆಯೇ ಆಗಿರುತ್ತದೆ. ಹೆಣ್ಣಾದವಳು ಸಮಾಜದಲ್ಲಿ ಹೇಗಿರಬೇಕು ಎಂಬ ತಮ್ಮ ನಿಯಮವನ್ನು ಉಲ್ಲಂಘಿಸಿದವಳಿಗೆ ಒಬ್ಬ ಗಂಡಸು ನೀಡುವಂಥ ಶಿಕ್ಷೆಯದು; ಅವಳಿಗೆ ಅವಳ 'ಸ್ಥಾನ' ತೋರಿಸುವ ಕ್ರಿಯೆ. ಇವರ್‍ಯಾರಿಗೂ ತಾವು ಮಾಡುತ್ತಿರುವುದರ ಬಗ್ಗೆ ನಿಜವಾದ ಅರಿವು ಇದ್ದಂತಿಲ್ಲ. ಈ ಎಲ್ಲರ ಮಾನಸಿಕ ಸ್ಥಿತಿ ಅಪಾಯಕಾರಿಯಾದದ್ದು. ಜೀವನದೃಷ್ಟಿಯೋ ಮೌಲ್ಯಗಳೋ ಯಾವೊಂದೂ ಇಲ್ಲದ ಬಾಲ್ಯ, ಜೀವನಪರಿಸ್ಥಿತಿಗಳಲ್ಲಿ ಹಾದುಬಂದವರಾಗಿರುತ್ತಾರೆ. ಬರೀ ಕಾನೂನು, ಶಿಕ್ಷೆ, ವ್ಯವಸ್ಥೆ ಇವಿಷ್ಟೇ ಸರಿ ಮಾಡಬಹುದಾದಂಥ ಸರಳ ವಿಷಯವಲ್ಲ ಇದು. ಇಂಥ ಹೇಯ, ಬರ್ಬರ ಕೃತ್ಯ ಮಾಡಿದವರಿಗೆ ಶಿಕ್ಷೆಯಾಗಬೇಕು ಸರಿ, ಶಿಕ್ಷೆಯಾಗುತ್ತದೆ ಕೂಡ. ಆದರೆ, ಕಠಿಣ ಶಿಕ್ಷೆ ಅಥವಾ ಗಲ್ಲುಶಿಕ್ಷೆ ಯಾವ ಪರಿಣಾಮ ಬೀರಬಲ್ಲದೋ ಅದಕ್ಕಿಂತಲೂ ಮುಖ್ಯವಾಗಿ, ಖಂಡಿತ ಶಿಕ್ಷೆಯಾಗುತ್ತದೆ ಅನ್ನುವುದಿದ್ದರೆ ಅದು ಸಮಾಜದ ಒಟ್ಟೂ ಪ್ರಜ್ಞೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.

2012ರ ದೆಹಲಿ ಪ್ರಕರಣದಲ್ಲಿ ಉಳಿದ ನಾಲ್ವರು ಆರೋಪಿಗಳ ವಿರುದ್ಧ ತನಿಖೆಯಾಗಿ, 2013ರ ಸೆಪ್ಟೆಂಬರಿನಲ್ಲಿ ಕೋರ್ಟ್ ಅವರಿಗೆ ಮರಣದಂಡನೆ ವಿಧಿಸಿದೆ. 2014ರಲ್ಲಿ ದೆಹಲಿ ಹೈಕೋರ್ಟ್ ಹಾಗೂ 2017ರಲ್ಲಿ ಸುಪ್ರೀಂ ಕೋರ್ಟ್ ಈ ತೀರ್ಪನ್ನು ಎತ್ತಿಹಿಡಿದಿವೆ. ದಾಖಲಾಗಿ ತನಿಖೆಯಾದ ಪ್ರಕರಣಗಳ ಪೈಕಿ ಶಿಕ್ಷೆ ವಿಧಿಸಿದಂಥ ಪ್ರಕರಣಗಳು ಅಭಿವೃದ್ಧಿ ಹೊಂದಿದ ಹಲವು ದೇಶಗಳಿಗಿಂತ ಇಂಡಿಯಾದಲ್ಲಿ ಹೆಚ್ಚೇ ಇವೆ. ಆದರೆ, ಇಲ್ಲಿ ಮುಖ್ಯ ವಿಷಯ ಅದಲ್ಲ. ವಿಶ್ವದ ಎಲ್ಲ ಕಡೆಯೂ ಸೇರಿದಂತೆ ಇಂಡಿಯಾದಲ್ಲಿ ಕೂಡ ಅತ್ಯಾಚಾರ ಪ್ರಕರಣಗಳು ದಾಖಲಾಗುವುದೇ ವಿರಳ. ಅಮೆರಿಕದಲ್ಲಿ ಸಹ ನಾಲ್ಕರಲ್ಲಿ ಒಂದೇ ಪ್ರಕರಣ ದಾಖಲಾಗುತ್ತದೆ. ಇವೆಲ್ಲ ಸಮಾಜದ ಮನಸ್ಥಿತಿಯನ್ನು ತೋರಿಸುತ್ತವೆ.

2012ರ ಡಿಸೆಂಬರಿನಲ್ಲಿ ರಚನೆಯಾದ ನ್ಯಾ. ಜೆ. ಎಸ್. ವರ್ಮಾ ಸಮಿತಿ ಕೊಟ್ಟ ವರದಿಯಲ್ಲಿ ಈ ಎಲ್ಲ ವಿಷಯಗಳ ವಿಶ್ಲೇಷಣೆ ಇದ್ದು, ಸಾರ್ವಜನಿಕರು ಮತ್ತು ಸಂಶೋಧನಾ ಸಂಸ್ಥೆಗಳ ಸಲಹೆಗಳನ್ನು ಪರಿಗಣಿಸಿ, ಅತ್ಯಾಚಾರ ತಡೆಗಟ್ಟುವಲ್ಲಿ ನಾವು ಮಾಡಬಹುದಾದಂಥ ಕಾನೂನು ತಿದ್ದುಪಡಿಗಳೂ ಸೇರಿದಂತೆ ಹಲವು ಮಾರ್ಗಸೂಚಿಗಳನ್ನು ನೀಡಲಾಗಿದೆ. ಜನವರಿ 2013ರ ಈ ವರದಿಯ ಪ್ರಕಾರ, 'ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ'ಕ್ಕೆ ಸಂಬಂಧಿಸಿದ ಐಪಿಸಿಯಲ್ಲಿನ ಕಾನೂನಿಗೆ ತಿದ್ದುಪಡಿಗಳನ್ನು ಮಾಡಲಾಯಿತು. ಈ ತಿದ್ದುಪಡಿಯ ಮೂಲಕ, ಲೈಂಗಿಕ ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಗಳ ಬೇರೆಬೇರೆ ಪ್ರಕಾರಗಳು ಐಪಿಸಿಗೆ ಸೇರಿಕೊಂಡವು.

ಈ ವರದಿ ಹೇಳುವ ಕೆಲವು ಮುಖ್ಯಾಂಶಗಳು ಹೀಗಿವೆ:

### ಪೊಲೀಸ್ ಸುಧಾರಣೆ

ಎಲ್ಲ ಪೊಲೀಸ್ ಠಾಣೆಗಳ ಪ್ರವೇಶದ್ವಾರ ಹಾಗೂ ವಿಚಾರಣಾ ಕೊಠಡಿಗಳಲ್ಲಿ ಸಿಸಿ ಟಿವಿ ಅಳವಡಿಸಬೇಕು. ಠಾಣೆಯ ವ್ಯಾಪ್ತಿ ಪರಿಗಣಿಸದೆ ಸಂತ್ರಸ್ತರಿಗೆ ಕಾನೂನು ಸಹಾಯ ಮಾಡುವುದು ಠಾಣಾಧಿಕಾರಿಗಳ ಕರ್ತವ್ಯ ಆಗಬೇಕು. ಹಲವು ರೀತಿಯ ಲೈಂಗಿಕ ಅಪರಾಧಗಳನ್ನು ಸರಿಯಾಗಿ ನಿಭಾಯಿಸುವ ಬಗ್ಗೆ ಅಧಿಕಾರಿಗಳಲ್ಲಿ ತಿಳಿವಳಿಕೆ ಮೂಡಿಸಬೇಕು. ಪೊಲೀಸರ ಸಂಖ್ಯೆ ಹೆಚ್ಚಳ ಮಾಡುವುದು. ಆನ್‌ಲೈನ್ ಎಫ್‌ಐಆರ್ ದಾಖಲಿಸುವ ವ್ಯವಸ್ಥೆ ಜಾರಿಗೆ ತರುವುದು. ಸಾಕ್ಷಿಗಳನ್ನು ಅಪರಾಧಿಗಳಂತೆ ನೋಡದೆ ಅವರಿಗೆ ರಕ್ಷಣೆ ಒದಗಿಸುವುದು.

### ಚುನಾವಣಾ ಸುಧಾರಣೆ

ಪ್ರಜಾಪ್ರತಿನಿಧಿ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಲೈಂಗಿಕ ಅಪರಾಧಗಳ ಆರೋಪಿಗಳನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹ ಮಾಡಬೇಕು.

### ಶೈಕ್ಷಣಿಕ ಸುಧಾರಣೆ

ಎಲ್ಲ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ